'ನಲ್ಕೆ' ಸಿನಿಮಾ ಮೂಲಕ ಸಾಕಾರ ಮಾಡಿಕೊಂಡಿದ್ದಾರೆ.

ತಮ್ಮೂರಿನ ಯಕ್ಷಗಾನ ಕಲೆಯನ್ನು ಮುಖ್ಯಭೂಮಿಕೆಯಲ್ಲಿಟ್ಟು, ಸಿನಿಮಾ ಹೆಣೆದಿದ್ದಾರೆ. ಈಚೆಗೆ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಆ ಸಿನಿಮಾ ಪ್ರದರ್ಶನ ಕಂಡಿದ್ದು, ಸಹೃದಯರ ಮೆಚ್ಚುಗೆ ಪಡೆದುಕೊಂಡಿದೆ. ಚಿತ್ರದ ಪೋಸ್ಟರ್‌ಗಳು ಕೂಡ ಗಮನ ಸೆಳೆಯುವಂತಿದೆ.

ತಮ್ಮ ಸಿನಿಮಾ ಬಗ್ಗೆ ತೃಪ್ತಿ ಇನ್ನಷ್ಟು ವಿವರ ನೀಡುತ್ತಾರೆ. 'ಇದೊಂದು ಆಫ್‌ಬೀಟ್ ಸಿನಿಮಾ. ಕಥೆ, ನಿರ್ದೇಶನ, ಸಂಭಾಷಣೆ ನನ್ನದೇ. ನನ್ನೂರಿನ ಕಲೆ ಯಕ್ಷಗಾನವನ್ನು ಬಳಸಿಕೊಂಡು ಸಿನಿಮಾ ಮಾಡಬೇಕೆಂಬುದು ನನ್ನ ಆಸೆಯಾಗಿತ್ತು. ಈ ಸಿನಿಮಾ, ಯಕ್ಷಗಾನಕ್ಕೆ ಸಂಬಂಧಿಸಿದ ಲೈಬ್ರರಿ ರೀತಿ ಇರಲಿದೆ. ಅಂಥ ಸಾಕಷ್ಟು ಪ್ರಯೋಗಗಳು ಸಿನಿಮಾದಲ್ಲಿವೆ. ಯಕ್ಷಗಾನ ಕಲೆ ವಿಶಿಷ್ಟ ರೀತಿಯಲ್ಲಿ ಸಿನಿಮಾ ಮೂಲಕ ದಾಖಲಾಗಬೇಕು, ಪಸರಿಸಬೇಕು ಎನ್ನುವುದು ನನ್ನಾಸೆ. ಈ ಆಶಯದೊಂದಿಗೆ 'ನಲ್ಕೆ' ಸಿನಿಮಾ ರೂಪಿಸಲಾಗಿದೆ. ಸಂಬಂಧಗಳ ಹಸಿವು, ಪ್ರೀತಿಯ ಹಸಿವು, ಹೊಟ್ಟೆ ಹಸಿವು, ದುಡ್ಡಿನ ಹಸಿವು ಈ ಎಲ್ಲವನ್ನೂ ಸಿನಿಮಾ ತೋರಲಿದೆ. 'ಸೇವ್ ಟೈಗರ್' ಪರಿಕಲ್ಪನೆ ಸಿನಿಮಾದಲ್ಲಿದ್ದು, ಊರಿಗೆ ವಾಪಸ್ಸಾಗುವ ಯಕ್ಷಗಾನ ಕಲಾವಿದನ ಜೀವನ, ಮಗುವಿನ ಪ್ರೀತಿಯ ಹಂಬಲ, ವನ್ಯಮೃಗಗಳ ಕುರಿತ ಕಾಳಜಿ, ಮಾನವನ ದುರಾಸೆ ಹೀಗೆ ಹಲವು ಶೇಡ್‌ಗಳನ್ನು ಯಕ್ಷಗಾನದ ಕೈ ಹಿಡಿದು ತೋರಲಾಗಿದೆ' ಎಂದು ಹೇಳುತ್ತಾರೆ ಅವರು.

ತಮ್ಮ ಸಿನಿಮಾಗೆ 'ನಲ್ಕೆ' ಎಂದು ಹೆಸರಿಟ್ಟಿರುವುದರ ಹಿನ್ನೆಲೆಯನ್ನೂ ತೆರೆದಿಟ್ಟರು ಅವರು. ''ನಲ್ಕೆ' ಪದವನ್ನು ಶಿವರಾಮ ಕಾರಂತರ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ. ಮಂಗಳೂರಿನ ಕಡೆ ಇದನ್ನು ಜಾತಿಸೂಚಕವಾಗಿ ನಲಿಕೆಯವರು ಎಂದು ಕರೆಯುತ್ತಾರೆ. ನಲಿಕೆ ಎಂದರೆ ಮೂಲತಃ ಕುಣಿತ. ನಮ್ಮ ಊರುಗಳಲ್ಲಿ ಕೋಲ ಕಟ್ಟಿ ಕುಣಿಯುವವರನ್ನು ನಲಿಕೆಯವರು ಎಂದು ಹೇಳುತ್ತಾರೆ. ಆದರೆ ನಾನು ಪದ ಬಳಸಿದ್ದು ನಲಿಕೆ–ಕುಣಿತ–ನಲಿತ ಎಂಬ ಅರ್ಥದಲ್ಲಿ. ಜೀವನ ಎನ್ನುವುದೇ ಕುಣಿತ. ನಮ್ಮ ಜೀವನದಲ್ಲಿ ಇಷ್ಟವಿರಲಿ, ಇಲ್ಲದಿರಲಿ ಕುಣಿಯಲೇಬೇಕು. ನಮಗಿಷ್ಟವಿಲ್ಲ ಎಂದು ಕುಣಿಯದೇ ಇರಲು ಸಾಧ್ಯವಿಲ್ಲ – ಇದೇ ಪರಿಕಲ್ಪನೆಯಲ್ಲಿ 'ನಲ್ಕೆ' ಹೆಸರಿಡಲಾಗಿದೆ. ಶೀಘ್ರವೇ ಈ ಸಿನಿಮಾ ಬಿಡುಗಡೆ ಮಾಡಲು ಸಿದ್ಧತೆ ನಡೆಯುತ್ತಿದೆ'' ಎಂದು ವಿವರಿಸುತ್ತಾರೆ.

ಮಹಿಳೆಯಾಗಿ, ಸಿನಿಮಾ ನಿರ್ದೇಶನದ ಸವಾಲುಗಳ ಕುರಿತು ಮಾತನಾಡಿದ ಅವರು, 'ಸಾಮಾನ್ಯವಾಗಿ, ಮಹಿಳೆಯರು ನಿರ್ದೇಶನ ಮಾಡಿದರೆ, 'ಯಾರೋ ಬರೆದುಕೊಟ್ಟಿರುತ್ತಾರೆ, ಸುಮ್ಮನೆ ಆ್ಯಕ್ಷನ್ ಕಟ್ ಹೇಳಿ ಹೋಗುತ್ತಾರೆ' ಎನ್ನುವವರನ್ನು ಕಂಡಿದ್ದೇನೆ. ಈ ಒಂದು ಮಾತೇ ನನಗೆ ಸವಾಲಾಗಿದೆ. ಇದೇ, ಸಿನಿಮಾ ಮಾಡಲು ನನಗೆ ಪ್ರೇರಣೆ' ಎನ್ನುತ್ತಾರೆ. ■

# ಔಟ್ ಆಫ್ ದಿ ಬಾಕ್ಸ್ ಪಾತ್ರಗಳತ್ತ ಅರ್ಚನಾ...



ಕೆಜಿಎಫ್ ಸಿನಿಮಾ ಹೆಸರಿನ ಜೊತೆಜೊತೆಗೆ ಕೇಳಿಬರುವ ಮತ್ತೊಂದು ಹೆಸರು ಅರ್ಚನಾ ಜೋಯಿಸ್. ಕೆಜಿಎಫ್ ಸಿನಿಮಾದಲ್ಲಿ ಯಶ್ ತಾಯಿ ಪಾತ್ರದಿಂದ ಮುನ್ನೆಲೆಗೆ ಬಂದ ನಟಿ ಅರ್ಚನಾ, ಈ ಮುನ್ನ ನಾಲ್ಕು ಸಿನಿಮಾಗಳಲ್ಲಿ ನಟಿಸಿದ್ದರು. ಅದಾಗ್ಯೂ ಅವರು ಜನರಿಗೆ ಹೆಚ್ಚು ಪರಿಚಿತವಾಗಿದ್ದು 'ರಾಕಿ ಬಾಯ್ ತಾಯಿ'ಯಾಗಿಯೇ.

ಅದೇ ಅರ್ಚನಾ ಇದೀಗ ಲೀಗಲ್ ಥ್ರಿಲ್ಲರ್ ಕಥೆಯ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಒಂದೇ ಜಾಡಿನ ಪಾತ್ರಗಳಿಗೆ ಎಂದಿಗೂ ಮಣೆ ಹಾಕಬಾರದು ಎಂಬ ಕಾರಣಕ್ಕೆ ತಮ್ಮ ಹಾದಿ ಹೊರಳಿಸಿರುವ ಅವರು, ಭಿನ್ನ ಧಾಟಿಯ ಪಾತ್ರಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಅದಕ್ಕೆ ಉದಾಹರಣೆ ಎಂಬಂತೆ ಎರಡು ಹೊಸ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

ಕೃಷ್ಣ ಅಜಯ್‌ರಾವ್ ಹಾಗೂ ಸುಪ್ರೀತಾ ಸತ್ಯನಾರಾಯಣ ಅಭಿನಯದ 'ಯುದ್ಧಕಾಂಡ' ಸಿನಿಮಾದಲ್ಲಿ ಬಣ್ಣ ಹಚ್ಚಲು ಅರ್ಚನಾ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಈ ಲೀಗಲ್ ಥ್ರಿಲ್ಲರ್ ಕಥೆಯ ಈ ಸಿನಿಮಾದಲ್ಲಿ ಅರ್ಚನಾ ಪಾತ್ರ ಕುತೂಹಲ ಮೂಡಿಸುವಂತಿದೆಯಂತೆ. ನಟ ಶಿವರಾಜ್ ಕುಮಾರ್ ಅಭಿನಯದ 'ಘೋಸ್ಟ್' ಸಿನಿಮಾದಲ್ಲಿಯೂ ದಿಟ್ಟ ಪತ್ರಕರ್ತೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಎರಡೂ ಯೋಜನೆಗಳು ಅವರನ್ನು ಹೊಸತೇ ರೀತಿ ತೋರಿಸುತ್ತವೆ ಎಂದು ಹೇಳಿಕೊಳ್ಳುತ್ತಾರೆ ಅವರು. ಸಿನಿಮಾಗಳ ಆಯ್ಕೆ ಕುರಿತು ಅರ್ಚನಾ ಮತ್ತಷ್ಟು ಪಕ್ವವಾಗಿರುವುದಾಗಿ ಹೇಳುತ್ತಾರೆ. 'ನಾನೀಗ ಹೆಚ್ಚು ಜಾಗರೂಕಳಾಗಿದ್ದೇನೆ. ಈ ಕೆಲ ವರ್ಷಗಳಲ್ಲಿ, ಸಿನಿಮಾ ಎಂಥ ಶಕ್ತಿಶಾಲಿ ಮಾಧ್ಯಮ ಎಂಬುದು ಮನವರಿಕೆಯಾಗಿದೆ. ಜೊತೆಗೆ, ಕಲಾವಿದರಾಗಿ, ಒಂದು ಸಿನಿಮಾದ ಯಶಸ್ಸು ಅಥವಾ ಸೋಲಿಗೆ ನಾವು ಎಷ್ಟು ಜವಾಬ್ದಾರರಾಗಿರುತ್ತೇವೆ ಎಂಬುದೂ ಅರಿವಾಗಿದೆ' ಎಂದಿದ್ದಾರೆ.

'ಈ ಹಿಂದೆ, ನಾನು ಸಿನಿಮಾಗಳಿಗೆ ಒಪ್ಪಿಗೆ ಸೂಚಿಸಬೇಕಾದರೆ, ನನ್ನ ಪಾತ್ರಕ್ಕೆ ಎಷ್ಟು ತೂಕವಿದೆ ಎಂಬುದನ್ನು ಮಾತ್ರ ನೋಡುತ್ತಿದ್ದೆ. ಆದರೆ ನಾನೀಗ ಹೆಚ್ಚು ಪ್ರಬುದ್ಧಳಾಗಿದ್ದೇನೆ. ಈಗ, ಒಂದು ಸಿನಿಮಾವನ್ನು ಒಟ್ಟಾರೆಯಾಗಿ ನೋಡುತ್ತೇನೆ. ನನ್ನ ಅಭಿನಯದ ಸಿನಿಮಾ ಸಮಾಜದಲ್ಲಿ, ಜನರ ಮನದಲ್ಲಿ ಯಾವ ರೀತಿ ಛಾಪು ಮೂಡಿಸಲಿದೆ ಎಂಬುದರ ಬಗ್ಗೆ ಯೋಚಿಸುತ್ತೇನೆ' ಎಂದು ಸಂದರ್ಶನವೊಂದರಲ್ಲಿ ವಿವರಿಸಿದ್ದಾರೆ.

ಕಂಫರ್ಟ್ ಝೋನ್‌ನಿಂದ ಹೊರಬರಬೇಕು ಎಂದು ಬಹುವಾಗಿ ಬಯಸಿರುವ ಅವರು, 'ಸಿನಿಮಾ ನಿರ್ದೇಶಕರು ಔಟ್ ಆಫ್ ದಿ ಬಾಕ್ಸ್‌ನಂಥ ಪಾತ್ರಗಳನ್ನು ನಿರ್ವಹಿಸುವ ಸಾಮರ್ಥ್ಯವಿರುವ ಕಲಾವಿದೆಯಾಗಿ ನನ್ನನ್ನು ನೋಡಬೇಕು' ಎಂದು ತಮ್ಮ ನಿರೀಕ್ಷೆಗಳನ್ನು ಅರುಹಿದ್ದಾರೆ.

'ಒಂದೇ ರೀತಿಯ ಪಾತ್ರಗಳು ಕಲಾವಿದರಿಗೆ ಕಂಫರ್ಟ್ ನೀಡುತ್ತವೆ. ಆದರೆ ಆ ಕಂಫರ್ಟ್ ಝೋನ್‌ನಿಂದ ಸೂಕ್ತ ಸಮಯದಲ್ಲಿ ಹೊರಬರುವುದು ಮುಖ್ಯ. ಪ್ರತಿ ಸಿನಿಮಾದಲ್ಲಿಯೂ ನಮ್ಮನ್ನು ನಾವು ವಿಭಿನ್ನ ಪಾತ್ರದ ಚೌಕಟ್ಟಿನಲ್ಲಿ ಕೂರಿಸಿಕೊಳ್ಳುವುದು ನಿರಂತರ ಸವಾಲು. ಅದು ಹೇಗೆಂದರೆ, ಕೆಜಿಎಫ್ ಸಿನಿಮಾಗೆ, ಪ್ರಶಾಂತ್ ಅವರು ನನ್ನಲ್ಲಿ ತಾಯಿಯನ್ನು ಕಂಡ ಹಾಗೆ. ಅದೇ ರೀತಿ ಬೇರೆ ನಿರ್ದೇಶಕರು ನನ್ನೊಳಗಿನ ವಿಭಿನ್ನ ಪಾತ್ರಗಳನ್ನು ಕಾಣಬೇಕಿದೆ. ಅದು ಸಾಧ್ಯವಾಗುವ ಭರವಸೆ ನನಗಿದೆ' ಎಂದಿದ್ದಾರೆ. ■